ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ ನಾನು ಒಂದು ವಿಷಯ ಹೇಳಬೇಕಾಗಿದೆ. ನಾಲ್ಕು ಜನ ಸೀಮೆಎಣ್ಣೆ ಸುರಿದುಕೊಂಡು ಸತ್ತಿದ್ದಾರೆ. ಇಲ್ಲಿ ಇವರು ಸಮಾಜವಾದ ತರುತ್ತೇವೆಂದು.....,

ಅಧ್ಯಕ್ಷರು.—ಬಾಳುವುದಕ್ಕೆ ಇಷ್ಟವಿಲ್ಲದವರು ಸತ್ತರೆ ಅವಕ್ಕೆ ಇಲ್ಲಿ ಚರ್ಚೆ ಮಾಡಬೇಕೇ ?

ಆ ವಿಚಾರ ಮಾನ್ಯ ಸದಸ್ಯರು ತಿಳಿದುಕೊಂಡಿರುವುದಕ್ಕಿಂತ ಚೆಚ್ಚಿಗೆ ನಾನು ತಿಳಿದುಕೊಂಡಿದ್ದೇನೆ. ಆ ಮನೆಯ ಯಜಮಾನ ವ್ಯಾಪಾರದಲ್ಲಿ ಎಲ್ಲವನ್ನೂ ಕಳೆದುಕೊಂಡ ಹಾಗೆ ವ್ಯಾಪಾರದಲ್ಲಿ ನಷ್ಟವಾದ ಮೇಲೆ ಇನ್ನೇತಕ್ಕೆ ಜೀವಿಸಿಕೊಂಡಿರಬೇಕು, ಬದುಕುವುದೇ ಬೇಡ ಎಂದು ಹಾಗೆ ಮಾಡಿಕೊಂಡಿದ್ದಾನೆ. ಆತನಿಗೆ ವ್ಯಾಪಾರ ಮಾಡು ಎಂದು ಯಾರೂ ಹೇಳಲಿಲ್ಲ ಆ ವ್ಯಾಪಾರದಲ್ಲಿ ನಷ್ಟಮಾಡಿಕೋ ಎಂದು ಯಾರೂ ಆತನಿಗೆ ಹೇಳಲಿಲ್ಲ. ಅವರವರ ಸ್ವಾತಂತ್ರ್ಯದಲ್ಲಿ ನಡೆದ ವ್ಯವಹಾರದಲ್ಲಿ ಈ ದುರಂತವಾಗಿದೆ. ಸದ್ಯಕ್ಕೆ ಈ ಸದನದಲ್ಲಿ ಆ ವಿಷಯ ಚರ್ಚೆ ಮಾಡಿ ಮಾಡುವುದಾದರೂ ಏನು ?

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ ಇದು ತೀರಾ ನಾಚಿಗೇಡಿನ, Matter not recorded or expuged as ordered by the chair.

ಅಧ್ಯಕ್ಷರು :—ಮಾನ್ಯ ಸದಸ್ಯರು ಯಾವ ವಿಷಯಗಳನ್ನು ಹೇಳಿದರೂ ರೆಕಾರ್ಡ್ ಮಾಡಬಾರದು.

CONDITIONS AT THE GOVERNMENT HOSPITALS

(MADAM SPEAKER on legs)

ಶ್ರೀ ವಾಟಾಳ್ ನಾಗರಾಜ್.—ನಾನು ಆಸ್ಪತ್ರೆಗೆ ಹೋಗಿದ್ದೆ, ಅಲ್ಲಿನ ದೃಶ್ಯ ನೋಡಿದರೆ ಕಣ್ಣೀರು ಬರುತ್ತದೆ. ನಮ್ಮ ಪರವಾಗಿ ವಿರೋಧ ಪಕ್ಷದ ನಾಯಕರಾದರೂ ಕೇಳಬೇಕು. ಈ ರೀತಿ ಅನೇಕ ಸಂಸಾರಗಳು ದುರ್ಗತಿಗೀಡಾಗಿವೆ. ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಬೇಕು. ಇದಕ್ಕೆ ಮುಖ್ಯ ಮಂತ್ರಿಗಳು ಅಶ್ವಾಸನೆ ಕೊಡಬೇಕು ಎಂದು ಕೈಮುಗಿದು ಕೇಳಿಕೊಳ್ಳುತ್ತೇನೆ. ಹೀಗೆ ಅನೇಕ ಸಂಸಾರಗಳು ಹಾಳಾಗಿವೆ, ಹೊಟ್ಟೆಬಟ್ಟೆಗಿಲ್ಲದೆ ಅನೇಕರು ಸಾಯುತ್ತಿದ್ದಾರೆ. ಅವರಿಗೆ ರಕ್ಷಣೆ ಕೊಡಬೇಕು, ಈ ವಿಚಾರವನ್ನು ಲಘುವಾಗಿ ತೆಗೆದುಕೊಳ್ಳಬಾರದು, ನನಗೆ ಸಂಕಟವಾಗಿದೆ. ಮುಖ್ಯ ಮಂತ್ರಿಗಳು ಒಂದು ಹೇಳಿಕೆ ಕೊಡಬೇಕು. ಇದು ಪ್ರಾಮುಖ್ಯವಾದ ಪ್ರಶ್ನೆ.

ಅಧ್ಯಕ್ಷರು.—ಮುಖ್ಯ ಮಂತ್ರಿಗಳ ಹತ್ತಿರವೇ ಹೋಗಿ ತಾವು ಕೇಳಿ, ಈಗ ಕುಳಿತುಕೊಳ್ಳಿ, ತಾವು ಕುಳಿತುಕೊಳ್ಳದಿದ್ದರೆ ಕಷ್ಟವಾಗುತ್ತದೆ. ತಾವು ಕುಳಿತುಕೊಳ್ಳದಿದ್ದರೆ ನಿಮ್ಮನ್ನು ಹೊರಗೆ ಕಳಿಸ ಬೇಕಾಗುತ್ತದೆ. ಇನ್ನು ಎರಡು ದಿವಸ ಮಾತ್ರ ಅಧಿವೇಶನವಿದೆ, ಸುಮ್ಮನೆ ಗಲಾಟೆ ಮಾಡಬಾರದು.

ಶ್ರೀ ವಾಟಾಳ್ ನಾಗರಾಜ್.—ನೀವು ಏನು ಬೇಕಾದರೂ ಮಾಡಿ.

MADAM SPEAKER.—Will Sri Vatal Nagaraj withdrw from the House..... ? Will be withdraw from the House immediately ;..... I am going to name him now ..... Will he please sit down ?

(SRI VATAL NAGARAJ aresumed his seat.)

SALE OF FERTILIZERS BY THE MADRAS FERTRILIZERS COMPANY

ಶ್ರೀ ಟಿ. ಎಂ ಮಂಜುನಾಥ್.—ತಾಲ್ಲೂಕು ಅಗ್ರಿಕಲ್ಚರಲ್ ಮಾರ್ಕೆಟಿಂಗ್ ಸೊಸೈಟಿಯವರು ರೈತರಿಗೆ ಗೊಬ್ಬರ ಸರಬರಾಯಿ ಮಾಡಿದ್ದಾರೆ. ಅದು ಮದ್ರಾಸಿನ ಫರ್ಟಿಲೈಜರ್ಸ್ ಕಂಪನಿಯಿಂದ ಬಂದಿರುವುದು. ಅದರಲ್ಲಿ ಒಂದು ಕೆಜಿಗೆ ಸುಮಾರು ೨೮೦ ಗ್ರಾಂ ಮರಳು ಬೆರಕೆಯಾಗಿದೆ. ಒಂದು ಟನ್ ಗೊಬ್ಬರಕ್ಕೆ ಬೆರೆಸಿರುವ ಮರಳಿನ ಬೆಲೆ ಸುಮಾರು ನೂರು ರೂಪಾಯಿ ಆಗಬಹುದು. ಗೊಬ್ಬರದ ಮೂಟೆ ತರಿಸಿ ಪರೀಕ್ಷೆ ಮಾಡಬೇಕು. ಅನ್ಯಾಯವನ್ನು ತಪ್ಪಿಸಬೇಕು ಎಂದು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.